ಉಗುಳುವ ಕಾರ್ಬನ್ ಡೈ ಆಕ್ಸೈಡ್ ಪ್ರಮಾಣ ಹೆಚ್ಚಾಗುವುದು ನೇರವಾಗಿ ವಾಯುಮಾಲಿನ್ಯ ತೀವ್ರವಾಗಲು ಕಾರಣವಾಗುತ್ತದೆ.

- ವಾಹನ ಸವಾರರು ಹಾಗೂ ಪ್ರಯಾಣಿಕರು ದೈಹಿಕ–ಮಾನಸಿಕ ಒತ್ತಡಕ್ಕೆ ಒಳಗಾಗುವುದು ಅನಾರೋಗ್ಯಕ್ಕೆ ದಾರಿ ಮಾಡಿಕೊಡುತ್ತದೆ. ಉಸಿರಾಟದ ತೊಂದರೆಗಳು ಸಾಮಾನ್ಯವಾಗುತ್ತವೆ. ತಲೆನೋವು ನಿತ್ಯದ ಅತಿಥಿಯಾಗುತ್ತದೆ. ಮಾನಸಿಕ ಸಮತೋಲನದಲ್ಲಿ ಏರುಪೇರಾಗಿ ಕ್ಷಣ ಚಿತ್ತ ಕ್ಷಣ ಪಿತ್ಥದ ಪರಿಸ್ಥಿತಿಯಿಂದಾಗಿ ವಾಹನ ಸವಾರರು ಕೆಲವೊಮ್ಮೆ ವೃಥಾ ವಾದಕ್ಕೆ, ಜಗಳಕ್ಕೆ ತೊಡಗುವುದು ಅಹಿತಕರ ಘಟನೆಗಳಿಗೆ, ಅಪಘಾತಗಳಿಗೆ ಆಸ್ಪದ ಕಲ್ಪಿಸುತ್ತದೆ. ಹೋಗಬೇಕಾದ ಸ್ಥಳವನ್ನು ಬೇಗನೆ ತಲುಪಬೇಕೆಂಬ ತರಾತುರಿಯಲ್ಲಿ ಸಂಚಾರ ನಿಯಮಗಳನ್ನು ಗಾಳಿಗೆ ತೂರಲಾಗುತ್ತದೆ. ಇದರ ಪರಿಣಾಮ ಪಾದಚಾರಿಗಳ ಮೇಲೂ ಉಂಟಾಗುತ್ತದೆ.
- ಸಂಚಾರ ದಟ್ಟಣೆಯಿಂದಾಗಿ ಆಂಬುಲೆನ್ಸ್ ಹಾಗೂ ಅಗ್ನಿಶಾಮಕ ದಳದಂತಹ ತುರ್ತು ವಾಹನಗಳ ಸಂಚಾರಕ್ಕೂ ಅಡ್ಡಿಯುಂಟಾಗುವುದು ಜೀವಹಾನಿ ಮತ್ತು ಆಸ್ತಿಪಾಸ್ತಿ ನಷ್ಟಕ್ಕೆಡೆ ಮಾಡಿಕೊಡುತ್ತದೆ.
- ವಾಹನಗಳ ಸವಕಳಿ ಹೆಚ್ಚುವುದು ಅನಗತ್ಯ ಖರ್ಚುಗಳಿಗೆ ದಾರಿಯಾಗುತ್ತದೆ.
- ಮುಖ್ಯವಾಗಿ ಇಂಧನದ ಬಳಕೆ ಹೆಚ್ಚಾಗುತ್ತದೆ.

## ಪರಿಹಾರ ಎನ್ನುವ ಮರೀಚಿಕೆ

ಟ್ರಾಫಿಕ್ ಜಾಮ್‌ಗೆ ಪರಿಹಾರಗಳೇನು? ಸರ್ಕಾರವನ್ನು ಕೇಳಿದರೆ ಫ್ಲೈಓವರ್‌ಗಳು, ತೂಗುಸೇತುವೆಗಳು, ಸುರಂಗ ಮಾರ್ಗಗಳತ್ತ ಬೆಟ್ಟು ಮಾಡುತ್ತದೆ. ರಸ್ತೆ ಅಗಲೀಕರಣದ ಮಾತುಗಳನ್ನಾಡುತ್ತದೆ. ಮೆಟ್ರೋ ರೈಲಿನ ಸಾಮರ್ಥ್ಯವನ್ನು ಬಣ್ಣಿಸುತ್ತದೆ. ಇವೆಲ್ಲವೂ ಸುಗಮ ಸಂಚಾರಕ್ಕೆ ಅಗತ್ಯ ಎನ್ನುವುದು ನಿಜ. ಆದರೆ, ಇವೆಲ್ಲ ಅಭಿವೃದ್ಧಿ ಚಟುವಟಿಕೆಗಳ ಜೊತೆಜೊತೆಗೇ ನಗರದ ಬೆಳವಣಿಗೆಯೂ ನಾಗಾಲೋಟದಲ್ಲಿ ಸಾಗುತ್ತಿದೆ. ಆ ಕಾರಣದಿಂದಾಗಿಯೇ ಟ್ರಾಫಿಕ್ ಜಾಮ್‌ನ ಹೊಸ ಹೊಸ ವಿಷವ್ಯೂಹಗಳು ಹುಟ್ಟಿಕೊಳ್ಳುತ್ತವೆ.

## ವಿಶ್ವದ ಅತಿ ಉದ್ದದ ಟ್ರಾಫಿಕ್ ಜಾಮ್!

ಚೀನಾದ ರಾಷ್ಟ್ರೀಯ ಹೆದ್ದಾರಿ 110ಕ್ಕೆ ಟ್ರಾಫಿಕ್ ಜಾಮ್ ಹೊಸದೇನಲ್ಲ. ಕಳೆದ ಕೆಲವು ವರ್ಷಗಳಿಂದ ಈ ಹೆದ್ದಾರಿಯಲ್ಲಿ ಪ್ರತಿ ವರ್ಷ ವಾಹನ ಸಂದಣಿ ಹೆಚ್ಚುತ್ತಲೇ ಇದೆ. ಮಂಗೋಲಿಯಾದ ಒಳಪ್ರದೇಶಗಳಿಂದ ಬೀಜಿಂಗ್‌ಗೆ ಕಲ್ಲಿದ್ದಲು ಪೂರೈಕೆಯಾಗುವುದು ಈ ಹೆದ್ದಾರಿಯ ಮೂಲಕವೇ. 2010ರ ಆಗಸ್ಟ್ 14ರಂದು ಸಂಭವಿಸಿದ ವಾಹನ ದಟ್ಟಣೆ ಜನಜೀವನವನ್ನೇ ಅಸ್ತವ್ಯಸ್ತಗೊಳಿಸುವಷ್ಟು ಭೀಕರವಾಗಿತ್ತು ಹಾಗೂ ವಿಶ್ವದ ಗಮನಸೆಳೆಯಿತು. ಇದು ವಿಶ್ವದಲ್ಲೇ ಈವರೆಗಿನ ಅತಿ ಉದ್ದದ ಟ್ರಾಫಿಕ್ ಜಾಮ್ ಎನ್ನಿಸಿದೆ. ಬೀಜಿಂಗ್ ಮತ್ತು ಟಿಬೆಟ್ ಸಂಪರ್ಕಿಸುವ ಈ ಎಕ್ಸ್‌ಪ್ರೆಸ್ ವೇನಲ್ಲಿ ಸಾವಿರಾರು ವಾಹನಗಳು ಸುಮಾರು 100 ಕಿ.ಮೀ. ಉದ್ದಕ್ಕೆ ನಿಂತಿದ್ದವು. ಈ ವಾಹನ ಸಂದಣಿ ಕರಗಲಿಕ್ಕೆ ಹತ್ತಕ್ಕೂ ಹೆಚ್ಚು ದಿನಗಳ ಸಮಯ ಬೇಕಾಯಿತು. ಆರಂಭದಲ್ಲಿ ವಾಹನವೊಂದು ದಿನಕ್ಕೆ ಒಂದು ಕಿ.ಮೀ. ಚಲಿಸಿದರೆ ಹೆಚ್ಚು ಎನ್ನುವ ಪರಿಸ್ಥಿತಿಯಿತ್ತು. ಕೆಲವು ವಾಹನ ಸವಾರರು ಸುಮಾರು ಐದು ದಿನಗಳ ಕಾಲ ರಸ್ತೆಯಲ್ಲೇ ಇರುವ ಪರಿಸ್ಥಿತಿ ಸೃಷ್ಟಿಯಾಗಿತ್ತು. ಈ ಟ್ರಾಫಿಕ್ ಜಾಮ್ ಸಂಭವಿಸಿದ ರಸ್ತೆಯ ಇಕ್ಕೆಲಗಳಲ್ಲೂ ತಾತ್ಕಾಲಿಕ ಮಾರುಕಟ್ಟೆಯೊಂದು ಸೃಷ್ಟಿಯಾಗಿತ್ತು. ವಾಹನ ಸವಾರರಿಗೆ ನೀರಿನ ಬಾಟಲಿಗಳು, ನೂಡಲ್ಸ್, ಸಿಗರೇಟ್, ಇತ್ಯಾದಿಗಳನ್ನು ಪೂರೈಸುವ ಅಂಗಡಿಗಳು ರೂಪುಗೊಂಡಿದ್ದವು.



